## ಕರ್ನಾಟಕ ವಿಧಾನ ಪರಿಷತ್ತು

**01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 117**

**02. ಸದಸ್ಯರ ಹೆಸರು : ಶ್ರೀ ಪ್ರಾಣೇಶ್ ಎಂ.ಕೆ**
**(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**03. ಉತ್ತರಿಸುವ ದಿನಾಂಕ : 19.12.2022**

**04. ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಪೇದೆ ಮತ್ತು ಮುಖ್ಯ ಪೇದೆ ಇವರಿಗೆ 4 ವಾರದ ಭತ್ಯೆಯನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್.ಸಿ ಮತ್ತು ಪಿ.ಸಿ ರವರುಗಳು ಹಗಲು ಮತ್ತು ರಾತ್ರಿ ಬೀಟ್ ಕರ್ತವ್ಯ ಹಾಗೂ ಹೆಚ್ಚಿನದ್ದಾಗಿ ಹೊರಾಂಗಣ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವರ ಮಾನಸಿಕ ಸ್ಥಿತಿಯನ್ನು ವೃದ್ಧಿಸಲು ಅನುಕೂಲವಾಗುವಂತೆ ಸದರಿ ಸಿಬ್ಬಂದಿಯವರುಗಳಿಗೆ ಕಡ್ಡಾಯವಾಗಿ ವಾರದ ರಜೆಯನ್ನು ನೀಡಲು ಡಿಜಿ & ಐಜಿಪಿ ರವರ ಸುತ್ತೋಲೆ ಸಂಖ್ಯೆ: ಆರ್.ಎಲ್.ಎನ್ (1)14/2021, ದಿನಾಂಕ:03.08.2021ರಲ್ಲಿ ಅವಕಾಶಕಲ್ಪಿಸಿದೆ.<br><br>ತುರ್ತು ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ವಾರದ ರಜೆಯಿಂದ ವಂಚಿತರಾಗುವ ಸಿಬ್ಬಂದಿಯವರುಗಳಿಗೆ ಮಾತ್ರ ವಾರದ ರಜೆ ಭತ್ಯೆಯನ್ನು ನೀಡಲಾಗುತ್ತಿದೆ.<br><br>ಬಹುತೇಕ ಎಲ್ಲಾ ಸಿಬ್ಬಂದಿಯವರುಗಳು ವಾರದ ರಜೆಯನ್ನು ಪಡೆಯುತ್ತಿರುವುದರಿಂದ 4 ವಾರದ ಭತ್ಯೆಯನ್ನು ನೀಡುವ ಸಂದರ್ಭ ಉದ್ಭವಾಗುವುದಿಲ್ಲ. |
| ಆ) | 4 ವಾರದ ಬದಲು ಕೇವಲ 2 ವಾರದ ಭತ್ಯೆ ನೀಡುತ್ತಿರುವ ಉದ್ದೇಶವೇನು; | |
| ಇ) | ಯಾವ ಯಾವ ವಿಭಾಗಗಳಲ್ಲಿ ಪೊಲೀಸ್ ಪೇದೆ ಮತ್ತು ಮುಖ್ಯ ಪೇದೆ ಇವರಿಗೆ 4 ವಾರದ ಭತ್ಯೆಯನ್ನು ನೀಡಲಾಗುತ್ತಿದೆ; | |
| ಈ) | ಯಾವ ಯಾವ ವಿಭಾಗಗಳಲ್ಲಿ ಪೊಲೀಸ್ ಪೇದೆ ಮತ್ತು ಮುಖ್ಯ ಪೇದೆ ಇವರಿಗೆ 2 ವಾರದ ಭತ್ಯೆಯನ್ನು ನೀಡಲಾಗುತ್ತದೆ; | |
| ಉ) | ಎಲ್ಲಾ ವಿಭಾಗದಲ್ಲೂ ಪೊಲೀಸ್ ಪೇದೆ ಮತ್ತು ಮುಖ್ಯ ಪೇದೆ ಇವರಿಗೆ 4 ವಾರದ ಭತ್ಯೆಯನ್ನು ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು? (ವಿವರ ನೀಡುವುದು) | |

**HD/265/PPS/2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು